45(291) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಪ್ರದೇಶ ಎಷ್ಟು ಹಾಗೂ ಅದರಲ್ಲಿ ಇಲ್ಲಿಯವರೆಗೆ ಬೇರೆ ಬೇರೆ ಯೋಜನೆಗಳಿಗೆ ಬಿಟ್ಟುಕೊಟ್ಟ ಅರಣ್ಯ ಪ್ರದೇಶ ಎಷ್ಟು; (ವಿವರಗಳನ್ನು ಒದಗಿಸುವುದು);

ಆ) ಅತಿಕ್ರಮಣ ಮಾಡಲಾದ ಒಟ್ಟು ಅರಣ್ಯ ಪ್ರದೇಶ ಎಷ್ಟು;

ಇ) ಇನ್ನು ಮುಂದೆ ಅತಿಕ್ರಮಣ ತಡೆಗಟ್ಟಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ 829603.89 ಹೆ.ಅದರಲ್ಲಿ ವಿವಿಧ ಯೋಜನೆಗಳಿಗೆ ಒಟ್ಟು 63142.165 ಹೆ. ಪ್ರದೇಶವನ್ನು ಸರ್ಕಾರದ ಆದೇಶದಂತೆ ಲೀಸ್ ಆಧಾರದ ಮೇಲೆ ಬಿಟ್ಟು ಕೊಡಲಾಗಿದೆ (ವಿವರಗಳನ್ನು ಲಗತ್ತಿಸಿದೆ)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 14729.00 ಹೆ. ಅರಣ್ಯ ಪ್ರದೇಶ ಅತಿಕ್ರಮಣವಾಗಿದೆ.

ಇ) ಕೇಂದ್ರ ಸರ್ಕಾರವು ತನ್ನ ದಿನಾಂಕ: 3-5-2002ರ ಪತ್ರದಲ್ಲಿ 1980ರ ನಂತರದಲ್ಲಿ ಆದ ಎಲ್ಲಾ ಅತಿಕ್ರಮಣಗಳನ್ನು ತೆರವುಗೊಳಿಸಲು ನಿರ್ದೇಶನ ನೀಡಿರುತ್ತದೆ. ಈ ಸಂಬಂಧ ರಾಜ್ಯ ಸರ್ಕಾರವು ಅತಿಕ್ರಮಣಗಳ ತೆರವುಗೊಳಿಸುತ್ತಿರುವುದನ್ನು ಸಮೀಕ್ಷೆ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಅಪಜೀ 335 ಎಫ್ ಜಿಎಲ್ 2002, ದಿನಾಂಕ: 30-7-2002ರ ಪ್ರಕಾರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಅಪಜೀ 335 ಎಫ್‌ಜಿಎಲ್ 2001 ದಿ: 1-8-2002ರಲ್ಲಿ ಅರಣ್ಯ ಸಂರಕ್ಷಣಾಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಿರುತ್ತದೆ. ಅಲ್ಲದೆ ಹೊಸದಾಗಿ ಅರಣ್ಯ ಪ್ರದೇಶ ಅತಿಕ್ರಮಣವಾಗದಂತೆ ಎಚ್ಚರ ವಹಿಸಲು ನಿರ್ದೇಶಿಸಲಾಗಿದೆ ಹಾಗೂ ಈ ಬಗ್ಗೆ ಎರಡೂ ಸಮಿತಿಗಳಿಗೂ ಪರಿಶೀಲನೆ ನಡೆಸುವಂತೆ ತಿಳಿಸಲಾಗಿದೆ.

1980ರ ಪೂರ್ವದಲ್ಲಿ ಬಿಡುಗಡೆ ಮಾಡಲಾದ ವಿವರ

ಕ್ರ.ಸಂ.	ವಿವರಗಳು	ವಿಸ್ತೀರ್ಣ(ಹೆ.ಗಳಲ್ಲಿ)
1	1968 ರಿಂದ 1969 ರವರೆಗಿನ ಅವಧಿಯಲ್ಲಿ ಸಾಗುವಳಿಗೋಸ್ಕರ ಮಂಜೂರು ನೀಡಲಾದ ಅರಣ್ಯ ಭೂಮಿ	6062.810
2	ಸರ್ಕಾರಿ ಆದೇಶ ಸಂಖ್ಯೆ: ಎ ಎಫ್‌ಡಿ:116 ದಿ:16/4/69 ರಂತೆ ಹಂಗಾಮಿ ಲಾಗಣಿ ಮೇಲೆ ನೀಡಲಾದ ಅರಣ್ಯ ಭೂಮಿ	20526.991
3	ಸರ್ಕಾರಿ ಆದೇಶ ಸಂಖ್ಯೆ:ಎ ಎಫ್‌ಡಿ-282/ಎಫ್‌ಜಿಎಲ್ 74 ದಿ: 17-12-74 ರಂತೆ ಮಂಜೂರು ಮಾಡಲಾದ ಅರಣ್ಯ ಭೂಮಿ	339.400
4	ದೀರ್ಘಾವಧಿ ಲೀಸ್ ಮೇಲೆ ನೀಡಲಾದ ಅರಣ್ಯ ಭೂಮಿ	162.100
5	ಗಾಂವಠಾಣಾಕ್ಕೆ ನೀಡಲಾದ ಅರಣ್ಯ ಭೂಮಿ	390.400
6	ಟೌನಶಿಪ್‌ಗೋಸ್ಕರ ನೀಡಲಾದ ಅರಣ್ಯ ಭೂಮಿ	1096.900
7	1972-79ರ ಅವಧಿಯಲ್ಲಿ ವಸತಿ ಹೀನನರಿಗೆ ವಸತಿ ಸೌಕರ್ಯ ಕಲ್ಪಿಸಲು ನೀಡಲಾದ ಅರಣ್ಯ ಭೂಮಿ	366.000

8	ಶರಾವತಿ, ಘಟಪ್ರಭಾ, ಮಲಪ್ರಭಾ, ಗೌಳಿ ಹಾಗೂ ಟಿಬೆಟಿಯನ್ಸ್ ರವರಿಗೆ ಪುನರ್ವಸತಿಗೋಸ್ಕರ ನೀಡಲಾದ ಅರಣ್ಯ ಭೂಮಿ	4548.170
9	ಕಾಳಿ ಹೈಡ್ರೋ ಯೋಜನೆ ಮುಳುಗಡೆಗೆ ನೀಡಲಾದ ಅರಣ್ಯ ಭೂಮಿ	14602.000
10	ಬೆಡ್ತಿ ಯೋಜನೆ ಮುಳುಗಡೆಗೆ ನೀಡಲಾದ ಅರಣ್ಯ ಭೂಮಿ	300.000
11	ವಿವಿಧ ನೀರಾವರಿ ಯೋಜನೆಗೆ ನೀಡಲಾದ ಅರಣ್ಯ ಭೂಮಿ	303.365
	ಒಟ್ಟು	48698.136

1980ರ ನಂತರದಲ್ಲಿ ಬಿಡುಗಡೆ ಮಾಡಲಾದ ವಿವರ

ಕ್ರ.ಸಂ	ವಿವರ	ವಿಸ್ತೀರ್ಣ(ಹೆ.ನಲ್ಲಿ)
1	ಸೀಬರ್ಡ ಯೋಜನೆಗೆ ನೀಡಲಾದ ಅರಣ್ಯ ಭೂಮಿ(1986)	2259.000
2	ಕೆ.ಪಿ.ಸಿ.ಯವರಿಗೆ ಶರಾವತಿ ಟೇಲರೇಸ್ ಯೋಜನೆಗಾಗಿ ನೀಡಲಾದ ಅರಣ್ಯ ಭೂಮಿ(1986)	700.00
3	ಕೆ.ಪಿ.ಸಿ.ಯವರಿಗೆ ಕೊಡಸಳ್ಳಿ ಡ್ಯಾಮ್ ಪವರ್ ಹೌಸ್ ಯೋಜನೆಗಾಗಿ ನೀಡಲಾದ ಅರಣ್ಯ ಭೂಮಿ (1987)	1360.000
4	ಕೆ.ಪಿ.ಸಿ.ಯವರಿಗೆ ಭದ್ರಾ ಡ್ಯಾಮ್ ಪವರ್ ಹೌಸ್ ಯೋಜನೆಗಾಗಿ ನೀಡಲಾದ ಅರಣ್ಯ ಭೂಮಿ (1987)	3053.000
5	ಸೀಬರ್ಡ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಲು ನೀಡಲಾದ ಅರಣ್ಯ ಭೂಮಿ (1989)	643.720
6	ಕೈಗಾ ಪ್ರಾಜೆಕ್ಟಗಾಗಿ ನೀಡಲಾದ ಅರಣ್ಯ ಭೂಮಿ (1988)	727.074
7	ಕೊಂಕಣ ರೈಲ್ವೆ ಯೋಜನೆಗಾಗಿ ನೀಡಲಾದ ಅರಣ್ಯ ಭೂಮಿ (1991)	272.140
8	ಕೆ.ಎಚ್.ಇ.ಪಿ. ಹಾಗೂ ಕೈಗಾ ಯೋಜನೆಯಲ್ಲಿ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸಲು ನೀಡಲಾದ ಅರಣ್ಯ ಭೂಮಿ (1993)	314.160
9	ನೀಬರ್ಡ್ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಲು ನೀಡಲಾದ ಅರಣ್ಯ ಭೂಮಿ (1996)	594.100
10	ಅತಿಕ್ರಮಣವನ್ನು ಸಕ್ರಮಗೊಳಿಸಲಾದ ಅರಣ್ಯ ಭೂಮಿಯ ವಿವರ (1997)	2824.852
11	ಕೆ.ಪಿ.ಟಿ.ಸಿ. ಎಲ್.ರವರಿಗೆ ಶರಾವತಿ–ಹುಬ್ಬಳ್ಳಿ 220 ಕೆ.ವಿ. ಲೈನ್ ನಿರ್ಮಾಣಕ್ಕಾಗಿ ಅರಣ್ಯ ಭೂಮಿ ಬಿಡುಗಡೆ (2000–01)	14,020
12	ಸೀಬರ್ಡರವರಿಗೆ ಎರ್ ಸ್ಟೇಶನ್ ನಿರ್ಮಾಣಕ್ಕಾಗಿ ಅರಣ್ಯ ಭೂಮಿ	246.460
13	ಕರುಣಾ ಆಲ್ ಇಂಡಿಯಾ ಸೊಸೈಟಿ ಕಾರವಾರ ರವರಿಗೆ ಮೌಲ್ಯ ಶಿಕ್ಷಣ ತರಬೇತಿ ನೀಡಲು ಆಶ್ರಮ ನಿರ್ಮಾಣ.	0.060
14	ಕೆ.ಯು.ಡಬ್ಲ್ಯು ಎಸ್ ಡಿ ಬೋರ್ಡು ಧಾರವಾಡ ರವರಿಗೆ ಕುಮಟು ದೀವಳ್ಳಿ ನೀರು ಸರಬರಾಜು ಕುರಿತು.	18.600
15	ಟೌನ್ ಮುನ್ಸಿಫಲ್, ಭಟ್ಕಳ, ಅಂಕೋಲಾ, ಕಾರವಾರರವರಿಗೆ ನೀಡಲಾದ ಅರಣ್ಯ ಭೂಮಿ ಬಿಡುಗಡೆ.	6.690

16	ಸಹ್ಯಾದ್ರಿ ಪೇಪರ್ಸ ಇವರಿಗೆ ನೀಡಲಾದ ಅರಣ್ಯ ಭೂಮಿ	2.000
17	ಫಾರೆಸ್ಟ ಎಂಪ್ಲಾಯಿಸ್, ಹೌಸಿಂಗ್ ಸೊಸೈಟಿ, ದಾಂಡೇಲಿ ರವರಿಗೆ ನೀಡಲಾದ ಅರಣ್ಯ ಭೂಮಿ ಬಿಡುಗಡೆ (2003)	10,088
18	ಪ್ರೈಮರಿ ಹೆಲ್ತ್ ಸೆಂಟರ್, ಸುಗಾವಿ ರವರಿಗೆ ನೀಡಲಾದ ಅರಣ್ಯ ಭೂಮಿ (2003)	0.670
19	ಅಧ್ಯಕ್ಷರು, ಮಹದ್ದೀಸ್ ಅಜಂ ಮಿಶನ್ ದಾಂಡೇಲಿ ರವರಿಗೆ ಖಬರಸ್ತಾನ ನೀಡಲು ಅರಣ್ಯ ಭೂಮಿ ಬಿಡುಗಡೆ (2003)	0.800
20	ಸೀಬರ್ಡ ಪ್ರಾಜೆಕ್ಟರವರಿಗೆ IIIನೇ ಸೀಬರ್ಡ ಯೋಜನೆಗಾಗಿ ಅರಣ್ಯ ಭೂಮಿ ಬಿಡುಗಡೆ.	1000.00
21	ಕೈಗಾ–ನರೇಂದ್ರ 220 ಕೆ.ವಿ.ಸಬ್‌ಸ್ಟೇಶನ ನಿರ್ಮಾಣಕ್ಕಾಗಿ ಅರಣ್ಯ ಭೂಮಿ ಬಿಡುಗಡೆ.	330.000
22	ಇತರೇ	8.365
23	ಕುಮಟಾ–ಮುರ್ಡೇಶ್ವರ 110 ಕೆ.ವಿ. ಲೈನ್ ನಿರ್ಮಾಣಕ್ಕಾಗಿ ಬಿಡುಗಡೆ.	60.230
	ಒಟ್ಟು	14444.029
	ಒಟ್ಟು	63142.165 ಹೆ.

46(292) ಶ್ರೀ ಗಂಗಾಧರನಾಗೇಶ್ ಭಟ್ (ಕಾರವಾರ) : ಮಾನ್ಯ ಕಾರ್ಮಿಕ ಹಾಗೂ ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಾರವಾರದಲ್ಲಿರುವ ಸರ್ಕಾರಿ ಐ.ಟಿ.ಐ.ನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಕೋರ್ಸ್‌ಗಳಿಗೆ ಆಯ್ಕೆ ಮಾಡಿದ ವಿದ್ಯಾರ್ಥಿಗಳು ಎಷ್ಟು; (ವಿದ್ಯಾರ್ಥಿಗಳ ಹೆಸರು ಕೋರ್ಸ್ ಅರ್ಹತೆಗೆ ಪರಿಗಣಿಸಿದ ಅಂಶ ಹಾಗೂ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದವರ ವಿವರ ನೀಡುವುದು)

ಆ) ಪ್ರವೇಶ ದಾಖಲಾತಿಗಳಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ದಾಖಲಾತಿ ಪ್ರಕ್ರಿಯೆಯಲ್ಲಿ ಅವ್ಯವಹಾರವಾಗಿರುವುದಕ್ಕೆ ಜವಾಬ್ದಾರರಾರು;

ಈ) ಖಾಲಿ ಇರುವ ಪ್ರಾಂಶುಪಾಲರ ಹುದ್ದೆ ಯಾವಾಗ ತುಂಬಲಾಗುವುದು?

ಶ್ರೀ ತನ್ವೀರ್ ಸೇಠ್ (ಮಾನ್ಯ ಕಾರ್ಮಿಕ ಹಾಗೂ ಹಜ್ ರಾಜ್ಯ ಸಚಿವರು) :

ಅ) ವಿವರಗಳನ್ನು ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ.

ಆ) ಇಲ್ಲ

ಇ) ಅನ್ವಯಿಸುವುದಿಲ್ಲ.

ಈ) ಮುಂದಿನ ವರ್ಗಾವಣೆ ಸಮಯದಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಯನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ–1

2002–03

		ಮಂಜೂರಾದ ಸ್ಥಾನಗಳು	ಪ್ರವೇಶ ಮಾಡಿಕೊಂಡ ಅಭ್ಯರ್ಥಿಗಳ ಸಂಖ್ಯೆ
1.	ವೆಲ್ಡರ್	14	12
2.	ಎಲೆಕ್ಟ್ರೀಷಿಯನ್	19	19